ಸುದ್ದಿ ಸಿಂಚನ

ಪ್ರೊ.ಎನ್.ಆರ್.ಶೆಟ್ಟಿ ಅವರಿಗೆ ಜೀವಮಾನದ ಸಾಧನೆ ಪ್ರಶಸ್ತಿ ಪ್ರದಾನ

ಯಲಹಂಕ: 'ಮನುಜಕುಲ ಒಂದೇ' ಎಂಬ ಧ್ಯೇಯದಿಂದ ಸ್ಥಾಪಿತವಾದ 'ವಿಶ್ವ ಸಂವಿಧಾನ ಮತ್ತು ಸಂಸತ್ತು ಸಂಘ'ದ ವಿಶ್ವದ ಶೈಕ್ಷಣಿಕ ರೂಪಾರಿ ವಿಭಾಗದ ಜೀವಮಾನದ ಸಾಧನೆಯ ಪ್ರಶಸ್ತಿಗೆ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಾಧಿಪತಿ, ನಿಟ್ಟೆ ಸಮೂಹ ವಿದ್ಯಾಸಂಸ್ಥೆಗಳ ಹಿರಿಯ ಸಲಹೆಗಾರ ಪ್ರೊ. ಎನ್.ಆರ್. ಶೆಟ್ಟಿ ಭಾಜನರಾಗಿದ್ದಾರೆ. ಅಮೆರಿಕದ ವರ್ಜೀನಿಯಾ ರಾಜ್ಯದ ಪೀಸ್ ಪೆಂಟಗಾನ್‌ನಲ್ಲಿರುವ 'ವಿಶ್ವ ಸಂವಿಧಾನ ಮತ್ತು ಸಂಸತ್ತು ಸಂಘ'ದ ಪ್ರಧಾನ ಕಚೇರಿಯು, 47ನೇ ಪೃಥ್ವಿ ಸಂವಿಧಾನ ದಿನಾಚರಣೆಯ ಅಂಗವಾಗಿ ವಿಶ್ವದೆಲ್ಲೆಡೆ ಆಯ್ದ ಸಾಧಕರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತಿದೆ. ಈ ಸಾಧಕರಲ್ಲಿ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದ ಹಿರಿಯ ಸಲಹೆಗಾರ ಪ್ರೊ.ಎನ್.ಆರ್.ಶೆಟ್ಟಿ ಅವರಿಗೆ ಜೀವಮಾನದ ಸಾಧನೆ ಪ್ರಶಸ್ತಿ ಮತ್ತು ನಿಟ್ಟೆ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ। ಎಚ್.ಸಿ. ನಾಗರಾಜ್ ಅವರಿಗೆ 'ಶಿಕ್ಷಕ-ಬದಲಾವಣೆಯ ರುವಾರಿ' ಪ್ರಶಸ್ತಿ ದೊರೆತಿದೆ. ಜೂನ್ 27ರಂದು 47ನೇ ಪೃಥ್ವಿ ಸಂವಿಧಾನ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಶ್ವ ಸಂವಿಧಾನ ಮತ್ತು ಸಂಸತ್ತು ಸಂಘದ ಜಾಗತಿಕ ಉಪಾಧ್ಯಕ್ಷ ಪ್ರೊ.ಇ.ಪಿ.ಮೆನನ್, ಪ್ರೊ. ಎನ್.ಆರ್.ಶೆಟ್ಟಿ ಮತ್ತು ಡಾ। ಎಚ್.ಸಿ.ನಾಗರಾಜ್ ಅವರಿಗೆ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಿದರು.

ಸೋಲಿನಿಂದ ಬಿಜೆಪಿ, ಜೆಡಿಎಸ್ ನಾಯಕರಿಗೆ ಹತಾಶೆ: ಚೆಲುವರಾಯ

ಪೀಣ್ಯ ದಾಸರಹಳ್ಳಿ: ಸಾರ್ವತ್ರಿಕ ಚುನಾವಣೆ ಸೋಲಿನಿಂದ ಬಿಜೆಪಿ, ಜೆಡಿಎಸ್ ನಾಯಕರು ಹತಾಶರಾಗಿದ್ದಾರೆ. ಏನಾದರು ಮಾಡಿ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ತಡೆಯಬೇಕು ಎಂದು ಮಸಲತ್ತು ಮಾಡುತ್ತಿದ್ದಾರೆ. ಇದು ಅಸಾಧ್ಯ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು. ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಪೀಣ್ಯ ಕೈಗಾರಿಕಾ ಸಂಘದಿಂದ ಹಮ್ಮಿಕೊಂಡಿದ್ದ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರಕ್ಕೆ ಭೂಮಿ ಪೂಜೆ, ಕೈಗಾರಿಕಾ ಸಂಘದ ಕಚೇರಿಯ ಹೆಚ್ಚುವರಿ ಸೌಲಭ್ಯ ವಿಭಾಗದ ಉದ್ಘಾಟನೆ, ಪಿಐಎ ಸಭಾಂಗಣದಲ್ಲಿ ಎಲ್‌ಇಡಿ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು. ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಎಚ್.ಮಂಜುನಾಥ್, ಗೌರವ ಕಾರ್ಯದರ್ಶಿ ಚಂದ್ರಶೇಖರ್, ಜಂಟಿ ಕಾರ್ಯದರ್ಶಿ ಮಲ್ಲೇಶ್ ಗೌಡ, ಉಪಾಧ್ಯಕ್ಷ ಶಿವಕುಮಾರ್, ಖಜಾಂಚಿ ರಮೇಶ್ ನಾಯ್ಡು, ಕಾಸಿಯಾ ಉಪಾಧ್ಯಕ್ಷ ರಾಜಗೋಪಾಲ್, ಹಿರಿಯ ಉಪಾಧ್ಯಕ್ಷ ಆರೀಫ್, ಉದ್ಯಮಿಗಳಾದ ಪ್ರಸಾದ್ ಬಾಬು ಇತರರಿದ್ದರು.

ಅಮೆರಿಕದ ವರ್ಜೀನಿಯಾ ರಾಜ್ಯದ ಪೀಸ್ ಪೆಂಟಗಾನ್‌ನಲ್ಲಿರುವ ವಿಶ್ವ ಸಂವಿಧಾನ ಮತ್ತು ಸಂಸತ್ತು ಸಂಘವು ಕರ್ನಾಟಕ ಕೇಂದ್ರೀಯ ವಿ.ವಿ.ಕುಲಾಧಿಪತಿ ಪ್ರೊ. ಎನ್.ಆರ್.ಶೆಟ್ಟಿ ನಿಟ್ಟೆ ಮೀನಾಕ್ಷಿ ಕಾಲೇಜಿನ ಪ್ರಾಂಶುಪಾಲ ಡಾ। ಎಚ್.ಸಿ.ನಾಗರಾಜ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿತು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಪೀಣ್ಯ ಕೈಗಾರಿಕಾ ಸಂಘದಿಂದ ಹಮ್ಮಿಕೊಂಡಿದ್ದ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರಕ್ಕೆ ಭೂಮಿ ಪೂಜೆ ನೆರವೇರಿಸಿದ ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಅವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು.

ಆನೇಕಲ್‌ನ ಬನ್ನೇರುಘಟ್ಟ ರಸ್ತೆಯ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಬಕ್ರೀದ್ ಅಂಗವಾಗಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ನಂತರ ಪರಸ್ಪರ ಆಲಿಂಗನದ ಮೂಲಕ ಭಾವೈಕ್ಯತೆಯ ಸಂದೇಶ ಸಾರಿದರು.

ನಗರದಲ್ಲಿ 9000 ಟನ್ ಮೀನು ಉತ್ಪಾದನೆ!

ಬೆಂ.ನಗರ ಜಿಲ್ಲೆ ವ್ಯಾಪ್ತಿಯ 160 ಕೆರೆಗಳಲ್ಲಿ ಮೀನು ಉತ್ಪಾದನೆ | ಶೇ.30 ಉತ್ಪಾದನೆ ಹೆಚ್ಚಳ | ಮೀನುಗಾರಿಕೆ ಇಲಾಖೆಗೆ ಉತ್ತಮ ಆದಾಯ

• ಗಿರೀಶ್ ಗರಗ

ಕನ್ನಡಪ್ರಭ ವಾರ್ತೆ ಬೆಂಗಳೂರು

ನಗರದ ಕೆರೆಗಳೆಲ್ಲವೂ ಕಲುಷಿತಗೊಳ್ಳುತ್ತಿದ್ದು, ನೀರನ್ನು ಮುಟ್ಟುವುದೂ ಕಷ್ಟ ಎಂಬ ಭಾವನೆ ಎಲ್ಲರಲ್ಲೂ ಇದೆ. ಆದರೆ, ಇದೇ ಕೆರೆಗಳ ನೀರಿನಲ್ಲಿ 2022-23ನೇ ಸಾಲಿನಲ್ಲಿ 9126 ಟನ್ ಮೀನು ಉತ್ಪಾದನೆ ಮಾಡಲಾಗಿದೆ.

ಮೀನುಗಾರಿಕೆ ಇಲಾಖೆಯು ಸಮುದ್ರ, ನದಿಗಳಲ್ಲಿನ ಮೀನುಗಾರಿಕೆಯನ್ನಷ್ಟೇ ಅಲ್ಲದೆ ಬೆಂಗಳೂರಿನಂತಹ ಮಹಾನಗರದಲ್ಲೂ ಮೀನು ಉತ್ಪಾದನೆಗೆ ಒತ್ತು ನೀಡುತ್ತಿದೆ. ನಗರ ಜಿಲ್ಲೆ ವ್ಯಾಪ್ತಿಯ 160 ಕೆರೆಗಳಲ್ಲಿ ಮೀನು ಉತ್ಪಾದನೆ ಮಾಡಲಾಗುತ್ತಿದ್ದು, 2022-23ನೇ ಸಾಲಿನಲ್ಲಿ 9,126 ಟನ್ ಮೀನು ಉತ್ಪಾದನೆ ಮಾಡಲಾಗಿದೆ. ಆ ಮೂಲಕ ಬೆಂಗಳೂರಿನಂತಹ ನಗರದಲ್ಲೂ ಮೀನುಗಾರಿಕೆಗೆ ಉತ್ತಮವಾಗುತ್ತಿದ್ದು, ಕಳೆದ ಮೂರು ವರ್ಷಗಳಲ್ಲಿ ಅಂದರೆ 2020-21ರಿಂದ 2022-23ರವರೆಗೆ 24,547 ಟನ್ ಮೀನು ಉತ್ಪಾದನೆ ಮಾಡಲಾಗಿದೆ.

ನೀರಿನ ಗುಣಮಟ್ಟ ಆಧರಿಸಿ ಲೈಸೆನ್ಸ್

ಕೆರೆಗಳಲ್ಲಿನ ನೀರಿನ ಗುಣಮಟ್ಟವನ್ನು ಆಧರಿಸಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಎ, ಬಿ, ಸಿ, ಡಿ ಮತ್ತು ಇ ಎಂದು ವರ್ಗೀಕರಿಸುತ್ತದೆ. ಆ ಪೈಕಿ 'ಎ'ನಿಂದ 'ಡಿ'ವರೆಗಿನ ಕೆರೆಗಳಲ್ಲಿ ಮೀನುಗಾರಿಕೆ ಮಾಡಲು ಅನುಮತಿಸಲು ಮೀನುಗಾರಿಕಾ ಇಲಾಖೆಗೆ ತಿಳಿಸುತ್ತದೆ. ಅಲ್ಲದೆ ಎ, ಬಿ, ಸಿ ಕೆರೆಗಳು ಮಾನವ ಬಳಕೆಗೆ ಹಾಗೂ ಡಿ ವರ್ಗದ ಕೆರೆ ವನ್ಯ ಜೀವಿ ಬಳಕೆ ಹಾಗೂ ಇ ವರ್ಗವು ಕೈಗಾರಿಕೆಗಳಿಗೆ ಬಳಸಿಕೊಳ್ಳಬಹುದು ಎಂದು ನಿಗದಿ ಮಾಡಲಾಗಿದೆ. ಅಲ್ಲದೆ, 'ಇ' ವರ್ಗದ ಕೆರೆಗಳು ಮೀನುಗಾರಿಕೆಗೆ ಅರ್ಹವಲ್ಲ ಎಂಬ ಕಾರಣಕ್ಕಾಗಿ ಮೀನುಗಾರಿಕೆ ಮಾಡಲು ಅವಕಾಶ ನೀಡಲು ಸಾಧ್ಯವಿಲ್ಲ.

ಶೇ.30 ಉತ್ಪಾದನೆ ಹೆಚ್ಚಳ: ಮೀನುಗಾರಿಕೆ ಇಲಾಖೆ ಮಾಹಿತಿಯಂತೆ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಮೀನುಗಾರಿಕೆಗಾಗಿ ಪರವಾನಗಿ ನೀಡಲಾದ ಕೆರೆಗಳಲ್ಲಿ ಮೀನು ಉತ್ಪಾದನೆ ಮಾಡಲಾಗುತ್ತಿದೆ. 2020-21ರಲ್ಲಿ 6,061 ಟನ್ ಮೀನು ಉತ್ಪಾದನೆಯಾಗಿದೆ. ಆದೇ 2021-22ರಲ್ಲಿ ಆ ಪ್ರಮಾಣ 9,360 ಟನ್‌ಗೆ ಏರಿಕೆಯಾಗಿದ್ದು, ಒಂದೇ ವರ್ಷದಲ್ಲಿ ಶೇ.30ರಷ್ಟು ಹೆಚ್ಚಳವಾಗಿದೆ. ಆದರೆ, 2022-23ನೇ ಸಾಲಿನಲ್ಲಿ ಹಿಂದಿನ ವರ್ಷಕ್ಕಿಂತ ಕೊಂಚ ಕಡಿಮೆಯಾಗಿದ್ದು, 9,126 ಟನ್ ಮೀನು ಉತ್ಪಾದಿಸಲಾಗಿದೆ.

104 ಕೆರೆಗಳಲ್ಲಿ ಮೀನುಗಾರಿಕೆ: 2023-24ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆ ಈವರೆಗೆ 104 ಕೆರೆಗಳಲ್ಲಿ ಮೀನುಗಾರಿಕೆ ಮಾಡಲು ಅವಕಾಶ ನೀಡಲಾಗಿದೆ. ಅದರಲ್ಲಿ 57 ಕೆರೆಗಳನ್ನು ಮೀನುಗಾರರ ಸಹಕಾರ ಸಂಘಗಳಿಗೆ (ಎಫ್‌ಸಿಎಸ್) ಗುತ್ತಿಗೆ ಆಧಾರದಲ್ಲಿ ನೀಡಲಾಗಿದೆ. ಉಳಿದ 47 ಕೆರೆಗಳನ್ನು ಟೆಂಡರ್ ಪ್ರಕ್ರಿಯೆ ನಡೆಸಿ ಖಾಸಗಿ ವ್ಯಕ್ತಿ, ಸಂಸ್ಥೆಗೆ ನೀಡಲಾಗಿದೆ. ಹೀಗೆ ಗುತ್ತಿಗೆ ಆಧಾರದಲ್ಲಿ ಕೆರೆಗಳಲ್ಲಿ ಮೀನುಗಾರಿಕೆ ಮಾಡಲು ಅನುಮತಿಸಿದ್ದರಿಂದ ಇಲಾಖೆಗೆ ₹75 ಲಕ್ಷ ಆದಾಯ ಬರುತ್ತಿದೆ. ಎಫ್‌ಸಿಎಸ್‌ಗೆ ಗುತ್ತಿಗೆ ಆಧಾರದಲ್ಲಿ ನೀಡಲಾಗಿದ್ದ 57 ಕೆರೆಗಳಿಂದ ₹14.4 ಲಕ್ಷ ಹಾಗೂ ಟೆಂಡರ್ ಪ್ರಕ್ರಿಯೆ ಮೂಲಕ 47 ಕೆರೆಗಳನ್ನು ನೀಡಿದ್ದರಿಂದ ₹60 ಲಕ್ಷ ಆದಾಯ ಬಂದಿದೆ. ಕಳೆದ ವರ್ಷ 160 ಕೆರೆಗಳಲ್ಲಿ ಮೀನು ಸಾಕಣೆ ಮಾಡಲು ಅನುಮತಿಸಲಾಗಿತ್ತು. ಹೀಗಾಗಿ ಈ ವರ್ಷ ಮುಂದಿನ ದಿನಗಳಲ್ಲಿ ಮೀನು ಸಾಕಣೆಗಾಗಿ ಕೆರೆಗಳ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆಯೂ ಇಲಾಖೆ ಅಧಿಕಾರಿಗಳು ಚಿಂತನೆ ನಡೆಸಿದ್ದಾರೆ.

> **ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಕೆರೆಗಳಲ್ಲೂ ಮೀನು ಉತ್ಪಾದನೆಗೆ ಒತ್ತು ನೀಡಲಾಗುತ್ತಿದೆ. ಕೆರೆಗಳ ನೀರಿನ ಗುಣಮಟ್ಟ ಆಧರಿಸಿ ಮಾಲಿನ್ಯ ನಿಯಂತ್ರಣ ಮಂಡಳಿ ಸೂಚಿಸುವ ಕೆರೆಗಳಲ್ಲಿ ಮೀನು ಗಣಿಗಾರಿಕೆ ಮಾಡಲು ಪರವಾನಗಿ ನೀಡಲಾಗುತ್ತಿದೆ. ಈ ವರ್ಷ 104 ಕೆರೆಗಳಲ್ಲಿ ಮೀನು ಸಾಕಣೆಗೆ ಪರವಾನಗಿ ನೀಡಲಾಗಿದೆ.**
>
> • **ಚಿಕ್ಕಣ್ಣ** ಮೀನುಗಾರಿಕಾ ಇಲಾಖೆಯ ಉಪನಿರ್ದೇಶಕ (ಬೆಂಗಳೂರು ನಗರ ಜಿಲ್ಲೆ)

ಆರೋಗ್ಯಕರ ಸಮಾಜಕ್ಕೆ ವಿದ್ಯಾರ್ಥಿಗಳ ಪಾತ್ರ ಮುಖ್ಯ

ನೆಲಮಂಗಲ: ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದು, ಅದಕ್ಕೆ ವಿದ್ಯಾರ್ಥಿಗಳು ಮಾದಕ ವಸ್ತುಗಳಿಂದ ದೂರ ಇರಬೇಕು ಎಂದು ವಾಜನರಹಳ್ಳಿ ಸೇಂಟ್ ಆನ್ಸ್ ಆಂಗ್ಲಶಾಲೆಯ ಮುಖ್ಯ ಶಿಕ್ಷಕಿ ಸಿಸ್ಟರ್ ಅವಿಯ ಹೇಳಿದರು. ಶಾಲೆಯಲ್ಲಿ ವಿಶ್ವತಂಬಾಕು ವಿರೋಧಿ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ತ್ಯಾಗ, ಬಲಿದಾನದ ಪ್ರತೀಕ ಬಕ್ರೀದ್ ಆಚರಣೆ

ನಗರದ ವಿವಿಧ ಈದ್ಗಾ ಮೈದಾನಗಳಲ್ಲಿ ಸಾಮೂಹಿಕ ಪ್ರಾರ್ಥನೆ | ಮೌಲ್ವಿಗಳಿಂದ ಬಕ್ರೀದ್ ಸಂದೇಶ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ತ್ಯಾಗ, ಬಲಿದಾನದ ಪ್ರತೀಕವಾದ ಬಕ್ರೀದ್ ಹಬ್ಬವನ್ನು ಗುರುವಾರ ನಗರಾದ್ಯಂತ ಮುಸಲ್ಮಾನರು ಆಚರಿಸಿದರು. ಚಾಮರಾಜಪೇಟೆ ಸೇರಿ ವಿವಿಧೆಡೆಯ ಈದ್ಗಾ ಮೈದಾನದಲ್ಲಿ ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿ ಪರಸ್ಪರ ಶುಭ ಕೋರಿಕೊಂಡರು.

ನಸುಕಿನಲ್ಲಿ ನಗರದ ಮಸೀದಿಗಳಲ್ಲಿ ಧರ್ಮಗುರುಗಳನೇತೃತ್ವದಲ್ಲಿ ಪ್ರಾರ್ಥನೆ ಸಲ್ಲಿಸಲಾಯಿತು. ಬಳಿಕ ಶುಭ್ರವಸ್ತ್ರ, ಟೋಪಿ ಧರಿಸಿ ಈದ್ಗಾ ಮೈದಾನದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ ಮುಸಲ್ಮಾನರಿಗೆ ಮೌಲ್ವಿಗಳು ಹಬ್ಬದ ಮಹತ್ವ, ಸಂದೇಶವನ್ನು ಸಾರಿದರು. ಕುರಾನ್ ಪಠಿಸುವ ದೇವರನ್ನು ಸ್ಮರಿಸಿ, ಕುರುಬಾನಿಯ ದುವಾವನ್ನು ಕೋರಲಾಯಿತು.

ನಗರದ ನಗರದ ಶೇಷಾದ್ರಿಪುರದ ರಿಸಾಲ್ದಾರ್ ಸ್ಟ್ರೀಟ್ ಮಸೀದಿ, ಶಿವಾಜಿನಗರದ ಜುಮ್ಮಾ ಮಸೀದಿ, ಅಕ್ಕಿಪೇಟೆಯ ಹಜರತ್ ತವಕ್ಕಲ್ ಮಸ್ತಾನ್ ಮಸೀದಿ, ಕುಂಬಾರಪೇಟೆ ಬಳಿಯ ಸಂಗೀನ್ ಜಾಮಿಯಾ ಮಸೀದಿ, ಬನ್ನೇರುಘಟ್ಟ ರಸ್ತೆಯಲ್ಲಿರುವ ಬಿಲಾಲ್ ಮಸೀದಿ, ಮಸೀದ್ ಈ ಮಾಮೂ, ಜೆಪಿ ನಗರದ ರಿಜ್ವಾನ್ ಮಸೀದಿ ಸೇರಿದಂತೆ ನಗರದ ಎಲ್ಲ ಮಸೀದಿಗಳಲ್ಲಿ ಪ್ರಾರ್ಥನೆಗಳು ಜರುಗಿದವು.

ಶಿವಾಜಿನಗರ ಸೇರಿ ಹಲವೆಡೆ ಹಬ್ಬದ ವಾತಾವರಣ ಕಳೆಗಟ್ಟಿತ್ತು. ಮಕ್ಕಳು, ಹಿರಿಯರು ಹೊಸ ಉಡುಗೆ ತೊಟ್ಟು ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು. ಮನೆಗಳಲ್ಲಿ ಬಕ್ರೀದ್ ಅಂಗವಾಗಿ ವಿಶೇಷ ಖಾದ್ಯ ತಯಾರಿಸಲಾಗಿತ್ತು. ಮಟನ್, ಬಿರಿಯಾನಿ, ಕಬಾಬ್, ಸಾರು, ಸುರಕುಂಬಾ, ಮಿಟ್ಟಾ ಸೇರಿದಂತೆ ತರಹೇವಾರಿ ಅಡುಗೆಗಳನ್ನು ಮಾಡಲಾಗಿತ್ತು. ಬಂಧುಗಳು, ಮಿತ್ರರನ್ನು ಆಹ್ವಾನಿಸಿ ಊಟ ಸವಿದರು. ಜೊತೆಗೆ ಬಡವರಿಗೆ ದಾನವನ್ನೂ ಮಾಡಲಾಯಿತು.

ನಗರದ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಮುಸಲ್ಮಾನರು ಸಾಮೂಹಿಕ ಪ್ರಾರ್ಥನೆ ನಡೆಸಿದರು.

ಪೊಲೀಸ್ ಬಂದೋಬಸ್ತ್

ಬಕ್ರೀದ್ ಹಿನ್ನಲೆಯಲ್ಲಿ ನಗರಾದ್ಯಂತ ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಈದ್ಗಾ ಮೈದಾನಗಳ ಸುತ್ತ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜನೆಮಾಡಲಾಗಿತ್ತು. ಜೊತೆಗೆ ಈ ಮೊದಲೇ ಸೂಚಿಸಿದ್ದಂತೆ ಮಾರ್ಗ ಬದಲಾವಣೆ ಮೂಲಕ ಸುಗಮ ಸಂಚಾರಕ್ಕೆ ಅನುವುಮಾಡಿಕೊಡಲಾಯಿತು.

ಸಿಎಂ, ಸಚಿವ ಶಾಸಕರು ಭಾಗಿ: ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಸಿಎಂ ಸಿದ್ದರಾಮಯ್ಯ, ಸಚಿವ ಜಮೀರ್ ಅಹ್ಮದ್ ಪಾಲ್ಗೊಂಡು ಪ್ರಾರ್ಥನೆ ಸಲ್ಲಿಸಿದರು. ನಗರದ ಶೇಷಾದ್ರಿಪುರದ ರಿಸಾಲ್ದಾರ್ ಸ್ಟ್ರೀಟ್ ಮಸೀದಿಯಲ್ಲಿ ಸಂಪ್ರದಾಯದಂತೆ ಜುಬ್ಬಾ, ಟೋಪಿ ಧರಿಸಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಪಾಲ್ಗೊಂಡು ಪ್ರಾರ್ಥನೆ ಸಲ್ಲಿಸಿದರು. ಅದರಂತೆ ಇತರೆಡೆ ಶಾಸಕರು ಕೂಡ ವಿವಿಧೆಡೆ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡು ಹಬ್ಬದ ಶುಭಾಷಯ ಕೋರಿದರು.

'ಸಂಸ ರಂಗ ಪತ್ರಿಕೆ' ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ 'ಕೆ.ಎನ್. ವಿಜಯಲಕ್ಷ್ಮಿ ನೆನಪಿನ ನಾಟಕೋತ್ಸವ'ವನ್ನು ಮೈಸೂರು ವಿವಿ ಇಂಗ್ಲಿಷ್ ಪ್ರಾಧ್ಯಾಪಕ ಡಾ। ಕೃಷ್ಣ ಮನವಲ್ಲಿ ಅವರು ಉದ್ಘಾಟಿಸಿದರು. ಬೆಂಗಳೂರು ಉತ್ತರ ವಿವಿ ಕುಲಸಚಿವರಾದ ಡಾ। ಡಿ.ಡಾಮಿನಿಕ್, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕಿ ಡಾ। ಕೆ.ಎನ್.ಕವನಾ, ಸಂಸ ಥಿಯೇಟರ್‌ನ ಸಂಸ ಸುರೇಶ್ ಉಪಸ್ಥಿತರಿದ್ದರು. ಜು.30ರ ವರೆಗೆ ನಯನ ಸಭಾಂಗಣದಲ್ಲಿ ನಾಟಕೋತ್ಸವ ನಡೆಯಲಿದೆ.

ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಡಿಸೈನ್ ಕೇಂದ್ರ ಆರಂಭ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಒಳಾಂಗಣ ವಿನ್ಯಾಸ, ಫ್ಯಾಷನ್, ಆಭರಣ, ಜವಳಿ, ಗ್ರಾಫಿಕ್, ಗೇಮಿಂಗ್ ಮತ್ತು ಅನಿಮೇಷನ್ ವಿನ್ಯಾಸದಲ್ಲಿ ಕೌಶಲ್ಯ ಆಧಾರಿತ ಶಿಕ್ಷಣ ನೀಡಲು ಬೆಂಗಳೂರು ಮತ್ತು ಮೈಸೂರು ನಗರದಲ್ಲಿ ಹೊಸದಾಗಿ 'ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಡಿಸೈನ್' ಕೇಂದ್ರಗಳನ್ನು (ಐಎನ್‌ಎಸ್‌ಡಿ) ಆರಂಭಿಸಲಾಗಿದೆ ಎಂದು ಸಂಸ್ಥೆಯ ನಿರ್ದೇಶಕಪ್ರಣವ್‌ರಾಜ್ ಅಗರ್ವಾಲ್ ತಿಳಿಸಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಂಜೇಯ್ ಅವರ ನೇತೃತ್ವದಲ್ಲಿ ಐಎನ್‌ಎಸ್‌ಡಿಯನ್ನು 2011ರಲ್ಲಿ ಭಾರತದಲ್ಲಿ ಆರಂಭಿಸಿದ್ದು, ಸದ್ಯ ದೇಶದಾದ್ಯಂತ 60 ಕೇಂದ್ರಗಳನ್ನು ಹೊಂದಲಾಗಿದೆ. ಕೌಶಲ್ಯ ಅಭಿವೃದ್ಧಿಯಲ್ಲಿ ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಪದವಿ, ಮತ್ತು ಅಲ್ಪಾವಧಿ ಕೋರ್ಸ್‌ಗಳ ಶಿಕ್ಷಣ ನೀಡಲಾಗುತ್ತಿದೆ ಎಂದು ತಿಳಿಸಿದರು.

ದಕ್ಷಿಣ ಭಾರತದ ಭುವಿ ಡಿಸೈನ್ಸ್ ಕೇಂದ್ರಗಳ ನಿರ್ದೇಶಕಿ ಡಾ। ಅಂಬಿಕಾ ಮತ್ತು ಅವರ ಪುತ್ರಿ ಅಶಿಕಾ ಅವರು ಐನ್‌ಎಸ್‌ಎಸ್‌ಡಿ ಮಾಸ್ಟರ್ ಫ್ರಾಂಚೈಸ್ ಪರವಾನಗಿ ಪಡೆದಿದ್ದಾರೆ. ಮೈಸೂರು ಮತ್ತು ಬೆಂಗಳೂರು ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಊರ್ಮಿಳಾ ಶರ್ಮಾ, ಅಕ್ಷತಾ ಮತ್ತು ಸುಶ್ರಿತಾ ಅವರು ಆಗತ್ಯ ಮಾರ್ಗದರ್ಶನ ನೀಡಲಿದ್ದಾರೆ ಎಂದು ತಿಳಿಸಿದರು.

ಸಮರ್ಥನೆ ಕೊಟ್ಟ ಮಾತು ಉಳಿಸಿಕೊಳ್ತೇವೆ: ಡಿಸಿಎಂ

ಬಿಜೆಪಿ ಮಾತು ಕೇಳಿ ಅಕ್ಕಿ ಬದಲು ಹಣ ನೀಡಲು ನಿರ್ಧಾರ: ಡಿಕೆಶಿ

ಅಕ್ಕಿಗೆ ಬದಲು ಹಣ ನೀಡಿಕೆ ತಾತ್ಕಾಲಿಕ ನಿರ್ಧಾರ ಅಷ್ಟೆ

• **ಕನ್ನಡಪ್ರಭ ವಾರ್ತೆ** ನವದೆಹಲಿ

ಬಿಜೆಪಿಯವರು ಅಕ್ಕಿ ಬದಲು ಹಣ ನೀಡಿ ಎಂದು ಹೇಳಿಕೆ ನೀಡಿದ್ದರು. ಅವರ ಮಾತು ಕೇಳಿ ಅನ್ನಭಾಗ್ಯ ಯೋಜನೆಯಡಿ ನಾವು ಅಕ್ಕಿ ಬದಲು ತಾತ್ಕಾಲಿಕವಾಗಿ ಹಣ ನೀಡುವ ನಿರ್ಧಾರ ಮಾಡಿದ್ದೇವೆ ಎಂದು ಉಪ